ಮೂಲಕ ಸಾಹೇಬರ ಇಮೇಜನ್ನು ದುಪ್ಪಟ್ಟು ಮಾಡಿದ್ದರು. ಅಂಥ ಸಾಹೇಬರ ಬಳಿ ನಾನು ಮತ್ತು ಮನೋಜ ಇಬ್ಬರೂ ಪ್ರೊಬೇಷನರಿ ಎಸ್ಸೈಗಳಾಗಿ ಕೆಲಸ ಮಾಡುವ ಅವಕಾಶ ಗಿಟ್ಟಿಸಿಕೊಂಡಿದ್ದೆವು.

ಸಾಹೇಬರನ್ನು ಮೊದಲ ಬಾರಿ ಎದುರುಗೊಂಡು ಖಡಕ್ಕಾದೊಂದು ಸೆಲ್ಯೂಟು ಕುಟ್ಟಿ ನಾವು ಠಾಣೆಯ ಪ್ರೊಬೇಷನರಿಗಳೆಂದು ಪರಿಚಯಿಸಿಕೊಂಡಿದ್ದೆವು. ಪರಗ್ರಹದ ಜೀವಿಗಳೇನೋ ಎಂಬಂತೆ ನಮ್ಮನ್ನವರು ಆಪಾದಮಸ್ತಕ ದಿಟ್ಟಿಸಿದ್ದರು. 'ಹ್ಹಾ... ಏನಂದ್ರಿ... ಎಂಥಾ ನರಿಗಳು?... ಪ್ರೊಬೇಷನರಿಗಳಾ?...' ಕೇಳಿಸದವರಂತೆ ಮತ್ತೆ ಕೇಳಿದ್ದರು. 'ನರಿಗಳಲ್ಲಯ್ಯಾ... ನೀವು ಸಿಂಹದ ಮರಿಗಳು ಗೊತ್ತಾಯಿತಾ? ಸಿಂಹಾನ ನೋಡೀರಾ?... ಜೂದಲ್ಲಿ ಒಣಗಿಕೊಂಡು ಬಡವಾಗಿ ಮೂಲೇಲಿ ಮಕ್ಕಂಡಿರ್ತದಲ್ಲಾ ಅದಲ್ಲ ಕಣ್ರಲೇ... ಕೊಬ್ಬು, ಕೊಬ್ಬಿದ ಸಿಂಹಾ... ಹ್ಹಾ, ಹಂಗಿರಬೇಕು ಗೊತ್ತಾಯ್ತಾ? ಇಲ್ಲಾ ಅಂದ್ರೆ ರೋಡಿನಾಗೆ ಹೋಗೋ ಕತ್ತೆ ಕಿರುಬಗಳೆಲ್ಲಾ ಬಾಲ ಅಲ್ಲಾಡಿಸ್ಕಂಡು ದೋಸ್ತಿ ಮಾಡಕ್ಕೆ ಬತ್ತವೆ... ತಿಳಿತೇನ್ರಲಾ ಹುಡುಗ್ರಾ?...' ಅಂದಿದ್ದರು ಮಾರ್ಮಿಕವಾಗಿ.

ಚಿತ್ತರಂಜನ್ ಸಾಹೇಬರದು ಭಾಳಾ 'ಯೂನಿಕ್ಕು' ಅನ್ನಿಸುವಂಥ ಸ್ಟೈಲು. ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಕರ್ತವ್ಯ ಮಾಡುತ್ತಿದ್ದುದು ಅವರಿಗೊಲಿದಿದ್ದ ಕಲೆ! ತಾವೇ ಮಾಡುವುದಕ್ಕಿಂತಲೂ ಇನ್ನೊಬ್ಬರ ಕೈಲಿ ಕೆಲಸ ಮಾಡಿಸುವ ಸಿದ್ಧಾಂತವನ್ನು ನಂಬಿದವರು. ರಿಪೋರ್ಟು ಮಾಡಿಕೊಂಡ ದಿನವೇ ಸಿಬ್ಬಂದಿಗಳನ್ನೆಲ್ಲಾ ರೋಲ್‌ಕಾಲು ಕರೆದು ಹೇಳಿಬಿಟ್ಟಿದ್ದರು. 'ನೋಡ್ರೆಪಾ, ನಾನು ಇಲ್ಲಿಗೆ ಬಂದಿರೋದು ಸರ್ಕಲು ಇನ್‌ಸ್ಪೆಕ್ಟ್ರಾಗಿ... ನನ್ನ ಕೆಲಸ ಏನಪಾ ಅಂದ್ರೆ ನಿಮ್ಮ ಕೈಯಾಗೆ ಡ್ಯೂಟಿ ತೆಗೆಯೋದು. ನಾನು ಇಲ್ಲಿರೋ ತನಕಾ ನೀವೆಲ್ಲರೂ ಬೈದುಕೊಂಡರೂ ಪರ್ವಾಗಿಲ್ಲ, ನಿಮ್ ಪಾಲಿನ ಕೆಲ್ಸ ಏನಿದೆಯೋ ಅದನ್ನು ತಕ್ರಾರು ಮಾಡದೆ ಮಾಡಿಕೊಂಡು ಹೋಗ್ತಾ ಇರಬೇಕು. ಮೈಗಳ್ಳರನ್ನು ಕಂಡರೆ ನನಿಗೆ ಭಾಳಾ ಕ್ವಾಪ... ಅವ್ರಿಗೂ ಬ್ಯಾರೆ ಕಳ್ಳರಿಗೂ ಹೆಚ್ಚು ವ್ಯತ್ಯಾಸ ಇರಾಕಿಲ್ಲ ಕಣ್ರಯ್ಯಾ... ಅವರು ಸಾಮಾನು ಕದೀತಾರೆ, ಇವ್ರು ಕೆಲ್ಸಕ್ಕೆ ಕದೀತಾರೆ ಅಷ್ಟೆ! ನಿಮ್ಮ ಕೆಲ್ಸ ನಾನು ಮಾಡಂಗಿದ್ರೆ ನೀವ್ ಯಾಕೆ ಇರಬೇಕು ಹೇಳ್ರಿ ನೋಡಾನ? ಹಂಗೇ ನನ್ನ ಕೆಲಸಾನ ಎಸ್ಸಿ ಬಂದು ಮಾಡಲಿ ಬಿಡು ಅಂತ ನಾನು ಸುಮ್ಕೆ ಕುಂತ್ಕಂಡ್ರೆ ಸ್ಟೇಷನ್ನಾಗೆ ಕೂತು ಏನು ಕಡೀತಾ ಇದೀಯೋ ನಾಲಾಯಕ್, ನಡೀ ಮನೇಗೆ... ಅಂತ ಕಳಿಸಾಕಿಲ್ವಾ? ಅದುಕ್ಕೇ ಅವರವರ ಜವಾಬುದಾರಿ ಏನಿದೆ ಅದಕ್ಕೆ ತಕ್ಕನಾಗಿ ಕೆಲಸ ಮಾಡಿಕೋತಾ ಹೋಗ್ಬೇಕು ಗೊತ್ತಾಯ್ತಾ? ಕೆಲಸದಲ್ಲಿ ಏನಾದ್ರೂ ಕಿರಿಕಿರಿ, ತೊಂದರೆ ಬಂದ್ರೆ ಅವಾಗ ನನ್ನತ್ರ ಹೇಳ್ಕಳಿ, ನಾನು ನೋಡ್ಕತೀನಿ' ಅಂದದ್ದಲ್ಲದೆ, 'ಇನ್ನೇನಾದ್ರೂ ಐತಾ ನಿಮ್ಮ ಕಡೆಯಿಂದ ಹೇಳೋದು?' ಕಣ್ಣಲ್ಲೇ ಎಲ್ಲರನ್ನು ಅಳೆಯುತ್ತಾ ಮತ್ತೆ ಕೇಳಿದ್ದರು.

ಸಾಹೇಬರ ಗತ್ತು ಗೈರತ್ತಿಗೆ ಸಿಬ್ಬಂದಿಗಳು ಬೋಲ್ಡ್ ಔಟಾಗಿದ್ದರು. ದೂಸರಾ ಮಾತಾಡುವವರು ಇದ್ದರೆ ತಾನೇ? ಎಲ್ಲರೂ ರೋಲ್‌ಕಾಲು ಮುಗಿಸಿ ತೆರಳಿದ ಮೇಲೆ ಕೆಲವು ಕಾಯಿಲೆ ಕಸಾಲೆ ಉಳ್ಳವರು, ಕೈಕಾಲು ಸರಿಯಾಗಿ ಆಡದವರು ಪರ್ಸನಲ್ಲಾಗಿ ಬಂದು ತಮ್ಮ ಸಂಕಷ್ಟಗಳನ್ನು ಹೇಳಿಕೊಂಡು ಸಾಹೇಬರ ಮನ ಕರಗಿಸಲು ವಿಧವಿಧವಾಗಿ ಪ್ರಯತ್ನ ಪಟ್ಟರಾದರೂ 'ಅದೆಲ್ಲಾ ಆಮೇಲೆ ನೋಡಾಣಂತೇ... ಬಂದ ತಕ್ಷಣ ದೂರು ದುಮ್ಮಾನಗಳ ಮೂಟೆ ಹೊತ್ಕಂಡು ಬರ್ಬೇಡಿ... ಮೊದ್ಲು ಡ್ಯೂಟಿ ಮಾಡಿ ಹೋಗ್ರೀ...' ಎಂದು ಕಳಿಸಿಬಿಟ್ಟಿದ್ದರು. ಸಾಹೇಬರು ಸ್ವಲ್ಪ ಅಂತಃಕರಣ ಉಳ್ಳವರೆಂದು ತೋರಿಸಿಕೊಂಡಿದ್ದೇ ಆದಲ್ಲಿ ಸಿಬ್ಬಂದಿಗಳು ತಮ್ಮ ಸಂಕಷ್ಟಗಳ ಪ್ರವಾಹವನ್ನೇ ಹರಿಸಿ ಅದರಲ್ಲಿ ಅವರನ್ನು ಮುಳುಗೇಳಿಸಿ ಬಿಡುವ ಸಾಧ್ಯತೆಯಿತ್ತು. ಅನುಭವಿಯಾದ ಸಾಹೇಬರು ಅದಕ್ಕೆ ಅವಕಾಶ ಕೊಡುವಂತವರಾಗಿರಲಿಲ್ಲ.